Reg.No. M. 1560.
KODAGU MERCARA, (Coorg).

-33-

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೩ | ತಾರೀಕು ೨—೩—೧೯೪೫ನೇ ಶುಕ್ರವಾರ. | ಸಂಚಿಕೆ ೩೯

ಕೊಡಗು ಕುಡುಕರ ರಾಜ್ಯವೇ?

ಲೇ:ಕ'ವಸು'

ಕೊಡಗು ನಾಡಿನಲ್ಲಿ ಪ್ರತಿ ಗ್ರಾಮದಲ್ಲೂ ಸೇಂದಿ ಸಾರಾಯಿ ಅಂಗಡಿಗಳಿದ್ದರೂ ಪ್ರತಿ ಗ್ರಾಮದಲ್ಲಿ ಸೇಂದಿ ಸಾರಾಯಿಯ ಹಾವಳಿ ಬಹು ವಿಸ್ತೃತರೀತಿಯಿಂದ ನಡೆಯುತ್ತಿದೆಯೆಂಬುದರಲ್ಲಿ ಸಂಶಯವಿಲ್ಲ. ಗುತ್ತಿಗೆಗಳಿಲ್ಲದಿದ್ದರೂ ಬೆಳಿಗ್ಗೆ, ಸಾಯಂಕಾಲ ಬೈನೆಮರಗಳ ಕೆಳಗೆ ಗುಂಪುಕಟ್ಟಿ ಗಲಭೆಮಾಡುವ ದೃಶ್ಯಗಳು ಅಪರೂಪವಲ್ಲ. ಸೇಂದಿ, ಸಾರಾಯಿಗಳ ಮೋಹಕ್ಕೆ ಬಲಿಯಾಗಿ ತಮ್ಮ ಕೆಲಸಗಳನ್ನು ಬಿಟ್ಟು ಹತ್ತಾರು ವೈಲು ಅಂಡೆಲೆಯುವವರಿಗೂ ಕಡಿಮೆಯಿಲ್ಲ. ಈ ಮೂದಕ ಪದಾರ್ಥಗಳು ಮನುಷ್ಯರ ಸ್ವಭಾವವನ್ನು ಕೆಡಿಸಿ ತಮ್ಮ ದಾಸರನ್ನಾಗಿ ಮಾಡಿಕೊಳ್ಳಲು ಅವುಗಳಲ್ಲಿರುವ ಶಕ್ತಿಯೇನು? ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದರೆ ಹೇಳಿಕೊಳ್ಳಲು ಏನೂ ಇಲ್ಲ. ತಮ್ಮ ಜೀವನದ ಕಷ್ಟವನ್ನು ಮರೆಯಲು ಕಳ್ಳುಕುಡಿಯುತ್ತಿರುವೆನೆನ್ನುವವರು ಕೆಲವರು. ಕಳ್ಳುಕುಡಿದು ಮತ್ತರಾಗಿ ಮೆರೆಯುವದೇ ಒಂದು ಸುಖ ಎನ್ನುವವರು ಕೆಲವರು. ಶರೀರದ ಆರೋಗ್ಯಕ್ಕೆ ಒಳ್ಳೆಯದೆನ್ನುವವರು ಕೆಲವರು. ಹೀಗೆ ನಾನಾದೃಷ್ಟಿಯಿಂದ ಕುಡಿಯುವವರಿದ್ದಾರೆ ಇದಾವುದಾದರೂ ಕಳ್ಳುಕುಡಿಯುವದರಿಂದ ಸಿದ್ಧಿಸುವದೇ? ಕಳ್ಳುಕುಡಿದು ಮತ್ತರಾಗಿ ಒಂದು ಕ್ಷಣ ಸರ್ವಸ್ವವನ್ನು ಮರೆತು ವರ್ತಿಸುವದೇನೋ ಸಹಜ. ಆದರೆ ಈ ಉನ್ಮತ್ತತೆಯಲ್ಲಿ ಮಾಡಿದ ಕೃತ್ಯಗಳಿಂದ ಜೀವಾವಧಿ ವರೆಗೆ ಪರಿತಪಿಸುತ್ತಿರುವವರು ಎಷ್ಟು ಜನರಿಲ್ಲ? ಆರೋಗ್ಯಕ್ಕೆಂದು ಕುಡಿಯಲು ಹೋಗಿ ಆದೇ ಒಂದು ಛಟವಾಗಿ ತನ್ನ ಸರ್ವಸ್ವವನ್ನು ಕಳಕೊಂಡವರೆಷ್ಟಿಲ್ಲ? ಮೂದಕಪದಾರ್ಥಗಳ ಅವಗುಣಗಳನ್ನು ವಿವರಿಸುವ ಆಗತ್ಯವೇ ಇಲ್ಲ; ಸರ್ವರಿಗೂ ಇವರ ಕಷ್ಟ ತಿಳಿದೇ ಇದೆ ಇದು ವ್ಯಕ್ತಿಗತವಾಗಿ ಮೂದಕಪಾನೀಯಗಳು ಮಾಡುತ್ತಿರುವ ಅನಾಹುತವಾದರೆ ಸಾಮೂಹಿಕವಾಗಿ ಇನ್ನಷ್ಟು ಕಷ್ಟನಷ್ಟಗಳನ್ನು ಇದು ಮಾಡುತ್ತಿದೆ. ಇಂದು ಮದುವೆಮುಂಜಿ ಮೊದಲಾದ ಶುಭಾಶುಭ ಕಾರ್ಯಗಳಲ್ಲಿ ಮೂದಕ ಪದಾರ್ಥಗಳನ್ನು ಸೇರಿಸುವದು ಒಂದು ಸಂಪ್ರದಾಯದಂತಾಗಿದೆ. ಸೇಂದಿ ಸಾರಾಯಿ ಸೇರಿಸದವರನ್ನು ಒಂದು ಕೃತಘ್ನದೃಷ್ಟಿಯಿಂದ ನೋಡುವ ಪರಿಪಾಠವಿದೆ. 'ನಮ್ಮಲ್ಲಿ ಬಂದು ಸಾರಾಯಿ ಕುಡಿದು ಆನಂದಪಟ್ಟವನು ತನ್ನ ಮದುವೆಯಲ್ಲಿ ಎಲ್ಲರಿಗೂ ಸೊನ್ನೆಸುತ್ತಿದನು' ಎಂಬ ಮಾತುಗಳನ್ನು ಕೇಳದವರಿಲ್ಲ. ಮದುವೆ ಮೊದಲಾದ ಶುಭ ಉತ್ಸವಗಳಲ್ಲೇ ಅಲ್ಲ; ಇತರ ಸಾಮೂಹಿಕ ಕೂಟಗಳಲ್ಲೂ ಮೂದಕಪದಾರ್ಥಗಳಿಗೆ ಸ್ಥಾನದೊರೆಯುತ್ತಿದೆ. ಕಾರಣವೇನು? ನಮ್ಮಲ್ಲಿ ಹೆಚ್ಚಿನವರಿಗೆ ಯಾವದು ಬಿಟ್ಟರೂ ಈ ಮೂದಕಪಾನೀಯಗಳನ್ನು ಬಿಡಲು ಸಾಧ್ಯವಿಲ್ಲವೆನಿಸಿಹೋಗಿದೆ. ಅದಮ್ಮ ಸೇವಿಸುವದೆಂದರೆ ಒಂದು ಹೆಮ್ಮೆ, ಒಂದು ಆನಂದವಾಗಿದೆ. ಯಾಕೆ? ನಮ್ಮ ಸಮೂಜವು ಈ ರೀತಿಯ ಕಳ್ಳುಕುಡಕರಿಗೆ ಪುರಸ್ಕಾರವಿತ್ತಿದೆ. ಈ ಕುಡುಕತನವು ಸಮೂಜದ ಸಂಪ್ರದಾಯವೆಂದು ಬಗೆದಿದೆ. 'ಕೊಡವ ಆನಪಿಂಞ ಕೂಡಿಪದ್ ಕಡಿಪದ್ ಬುಡುವಕಯ್ಯುವಾ?' ಎಂಬುದು ಕೊಡವ ಸಮೂಜದವರ ಸಿದ್ಧಾಂತವಾಗಿ ಹೋಗಿದೆ. ಪರಿಣಾಮವೇನು? ಕೊಡವ ಸಮೂಜದಲ್ಲಿ ಆರ್ಥೀಯವಾಗಿ ತೊಳಗಿಬೆಳಗುತ್ತಿದ್ದ ಕ್ಷಾತ್ರತೇಜಮಾಯವಾಗಿದೆ. ಅಪರ ಸಿರಿಸಂಪದಗಳು ಇತರರ ಹಸ್ತಗತವಾಗಿವೆ. ಅವರ ಸ್ವಾತಂತ್ರ್ಯ, ಸ್ವಾಭಿಮಾನ ನಾಶವಾಗಿ ಅಧಃಪಾತಕ್ಕಿಳಿದ್ದಾರೆ. 'ಜೋ ಹುಕ್ಕು' ಭಾವನೆಯಲ್ಲಿ ಶರಬಾಗಿ ಕೇವಲ ಭೀರುಗಳಾಗಿದ್ದಾರೆ.

ಹಗಲಿಡೀ ದುಡಿಯುವವರಿಗೆ ಇದು ಹಿತವೆಂಬ ಭಾವನೆಯಿಂದ ಇದರ ಸೇವನೆಗೆ ಹೋಗಿ ಅವಲು ತಲೆಗೇರಿ ಬುದ್ಧಿಸ್ವಾಸ್ಥ್ಯವಿಲ್ಲದೆ ಕೊಲೆ, ದಂಗೆಗಳಿಗೆ ಕಾರಣವಾಗಿದೆ. ಮರ್ಯಾದೆಗಾರರ ಮರ್ಯಾದೆಯನ್ನೂ, ನ್ಯಾಯವಂತರ ನ್ಯಾಯವನ್ನೂ ಅವಲು ತಲೆಗೇರಿದಾಗ ಮಾಯವಾಗುತ್ತವೆ. ಈ ರೀತಿ ಈ ಅವಲು ಸೇವನೆಯಿಂದ ಕೊಡಗಿನಲ್ಲಿ ಆಗುತ್ತಿರುವ ನಷ್ಟ, ಕಷ್ಟ, ನೀಚಕಲಸಗಳು ಅಸಂಖ್ಯಾತವಾಗಿವೆ. ಇವುಗಳನ್ನೆಲ್ಲಾ ವರ್ಣಿಸಬೇಕಾದ ಅವಶ್ಯಕತೆಯಿಲ್ಲ.

ಹಳ್ಳಿಯ ರೈತನು ಹಿಂದೆಯೂ ಬಡವನು. ಇಂದೂ ಬಡವನೆ. ಇಂದು ಆತನ ಕೈಯಲ್ಲಿ ಹೆಚ್ಚು ಹಣ ಓಡಾಡುತ್ತಿದೆ. ಹಣ ಓಡಾಡಿದರೂ ಆತನಿಗೆ ಲಾಭವಿಲ್ಲ. ಬತ್ತಕ್ಕೆ ಹೆಚ್ಚು ಕ್ರಯದೊರೆತರೂ ಇತರ ಸಾಮಾನುಗಳನ್ನೂ ಹೆಚ್ಚು ಕ್ರಯಕೊಟ್ಟೇ ಆತನು ಪಡೆಯಬೇಕು. ಆದರೂ ಎಂದೂ ಇರದ ರೀತಿ ಓಡಾಡುವ ಹಣವನ್ನು ಕಂಡು ತಾನು ಸಿರಿವಂತನಾಗಿರುವೆನೆಂಬ ಭ್ರಮೆ ಆತನಿಗೆ ಬಂದಿದೆ. ಆದ್ದರಿಂದ ಆತನು ಇಂದು ತನ್ನಲ್ಲಿಯ ಹಣವನ್ನು ಅವಲು ಪದಾರ್ಥಕ್ಕೆ ಹೆಚ್ಚೆಚ್ಚು ಖರ್ಚುಮಾಡಲು ತೊಡಗಿದ್ದಾನೆ. ಇದರ ಪರಿಣಾಮ ಹಣದ ಈ ಉಬ್ಬರದ ಕಾಲದಲ್ಲಿ ಗೋಚರವಾಗಲಿಕ್ಕಾರದು. ತನ್ನ ಇಂದಿನ ಸೌಭ್ಯತೆಗಾಗಿ ಬೆರಳು ಕಚ್ಚುವ ದಿನಗಳು ಮುಂದೆ ಬಾರದಿರವು. ಇಂದು ಕೊಡಗಿನ ಬಡ ರೈತರಾದ ನಮ್ಮ ಲಕ್ಷಾಂತರ ರೂಪಾಯಿಗಳು ಈ ಸುರಪಾನಕ್ಕಾಗಿ ಸೂರೆಯಾಗುತ್ತಿವೆ. ಕೊಡಗು ಸರಕಾರದ ಆದಾಯದ $\frac{1}{3}$ ಅಂಶದಷ್ಟು ಹಣ ಅಂದರೆ 5 ಲಕ್ಷಕ್ಕೆ ಮಿಂಚಿದ ಹಣ ಎಕ್ಸೈಸ್ ಉತ್ಪತ್ತಿಯಿಂದ ಬರುತ್ತದೆ ಎಂದರೆ ಅದರ ಅರ್ಥವೇನು? ಕೊಡಗು ಕುಡುಕರನಾಡಾಗಿದೆ; ದುಃಶ್ಚಟಗಳ ಆಗರವಾಗಿದೆ ಎಂದಲ್ಲವೇ? ಸರ್ವಜ್ಞಕವಿಯು, "ಸುರೆಯ ಸೇವಿಸುವಂಗೆ | ಸಿರಿಗರ್ವಪಿಡಿದಂಗೆ | ಪರಸ್ತ್ರೀಯ ಮುಟ್ಟುವೋಪಂಗೆ | ಶಿರವಿಹುದು-ಸ್ಥಿರವಲ್ಲನೋಡು ಸರ್ವಜ್ಞ || ಎಂದು ಹೇಳಿದ ನುಡಿ ಎಂದೂ ಅಸತ್ಯವಲ್ಲ. ಮದ್ಯಪಾನ ಮಾಡಿದವನಿಗೆ ತಲೆಯಿರಲಾರದು. ಅಂದರೆ ಬುದ್ಧಿಬಲವಿರಲಾರದು. ಬುದ್ಧಿಬಲವಿಲ್ಲದವನು ಶಿರವನ್ನು ಉಳಿಸಿಕೊಳ್ಳಲಾರನು. ಆದ್ದರಿಂದ ಕೊಡಗುನಾಡು ಮದ್ಯವಾನದ ದುಶ್ಚಟಕ್ಕೆ ಬಿದ್ದು ವಿನಾಶಪತನವನ್ನು ಹಿಡಿದಿದೆ. ಈ ಸಂದರ್ಭದಲ್ಲಿ ನಾವು ಎಚ್ಚೆತ್ತುಕೊಂಡು ವರ್ತಿಸದಿದ್ದರೆ ನಮ್ಮ ಅವನತಿಯೂಗುವದು ಖಂಡಿತ.

ಆದರಲ್ಲೂ ಹಳ್ಳಿಗರಾದ ನಾವೆ, ಬಡ ರೈತರು ಹೆಚ್ಚು ಎಚ್ಚರಿಕೆಯಿಂದ ವರ್ತಿಸಬೇಕು. ನಮ್ಮ ದುಡ್ಡು ಅನಾವಶ್ಯಕ ಹಾಳಾಗಿ ಹೋಗಬಾರದು. ಬೆವರು ಸುರಿಸಿ, ರಕ್ತಕುದಿಸಿ ದುಡಿದ ದುಡಿತ ಈ ರೀತಿ ಅಪವ್ಯಯವಾಗಬಾರದು. ಕೊಡಗಿನಲ್ಲಿ ಸೇಂದಿ ಸಾರಾಯಿ ಅಂಗಡಿಗಳ ಹರಾಜಾಯಿತು. ಪ್ರತಿಯೊಂದು ಅಂಗಡಿಯೂ ಕಳೆದ ವರ್ಷಕ್ಕಿಂಥಾ ಹೆಚ್ಚಿಗೆ ಹಣಕ್ಕೆ ಹರಾಜಾಗಿದೆ. ಯಾವ ಧೈರ್ಯದಿಂದ ಕಂಟ್ರಾಕ್ಟರರು ಹೀಗೆ ತೆಗೆದುಕೊಂಡಿರುವರು. 'ರತ್ನ' ನುಡಿದ ಮಾತಿನಂತೆ, 'ನೀರ್ ಗಿರ್ ಬೆರೆಸಿ ಮಾರಿ! ತೊಟ್ ತೊಟ್ಟೂನೆ ವೋರಿ! ಬಡವನ ಜೀತದ ಪುಡಿಕಾಸ್ನೆಲ್ಲಾ! ಕೆರಕೋಂತಾನೆ ಗೋರಿ!' ಎಂಬುದು ಸತ್ಯ. ಆದ್ದರಿಂದ ರೈತರಾದ ನಾವು ಎಚ್ಚರಿಕೆವಹಿಸಬೇಕು. ಯಾವ ಸುಧಾರಕರೂ ಬಂದು ನಮ್ಮನ್ನು ಉದ್ಧಾರವಾಡುವಂತಿಲ್ಲ. ನಾವೇ ನಮ್ಮ ಉದ್ಧಾರಮಾಡಿಕೊಳ್ಳಬೇಕು. ಪ್ರತಿ ಗ್ರಾಮದ ಬೆನ್ನಲುಬಾದ ನಾವುಗಳು ಸಂಘಟನೆ ಮಾಡಿಕೊಂಡು, ಸಮಿತಿಗಳನ್ನು ನೇಮಿಸಿಕೊಂಡು ಯೋಗ್ಯಸಲಹೆ ತೆಗೆದುಕೊಂಡು ನಮ್ಮನಾಡನ್ನು ಆವರಿಸಿರುವ ಈ ದುಶ್ಚಟವನ್ನು ನಿವಾರಿಸಲು ಯತ್ನಿಸಬೇಕು. ಮದುವೆ ಹಬ್ಬ, ಹುಣ್ಣಿಮೆಗಳಲ್ಲಿ ಮೂದಕಪದಾರ್ಥಗಳನ್ನು ಉಪಯೋಗಿಸದಂತೆ ಗ್ರಾಮದಲ್ಲಿ ಪ್ರಚಾರಮಾಡಿ ಎಲ್ಲರನ್ನೂ ಒಪ್ಪಿಸಿ ಆ ರೀತಿ ಕಟ್ಟುಮಾಡಬೇಕು. ನಮ್ಮ ಮಕ್ಕಳ ಹಿತಕ್ಕಾಗಿ, ಕುಟುಂಬದ ಸೌಖ್ಯಕ್ಕಾಗಿ ಉಪಯೋಗವಾಗಬೇಕಾದ ದುಡ್ಡು ಸೇಂದಿ ಕಂಟ್ರಾಕ್ಟುದಾರನ ಕಿಸೆಸೇರುವದು ವಿಶಾದದ ಸಂಗತಿ. ನಿಷ್ಕಾಮಭಾವದಿಂದ ಬೆವರಿಳಿಸಿ ದುಡಿದ ಪವಿತ್ರ ಸಂಪಾದನೆಯು ಸುರಾಂಗನೆಯ ಮಡಿಲಲ್ಲಿ ಭಸ್ಮವಾಗುವದು ಕೊಡಗಿನವರ ದುರ್ದೈವ. ಮಾನವ ಜನ್ಮವು ಪವಿತ್ರವಾದುದು ಮನುಷ್ಯಶರೀರವೇ ಜಗತ್ತಿನ ಅತ್ಯುತ್ತಮ ದೇವಸ್ಥಾನ. ಇಂಥಾ ದೇವಸ್ಥಾನದಲ್ಲಿ ಪವಿತ್ರಭಾವನೆಯ ಆರಾಧನೆಮಾಡುವದನ್ನು ಬಿಟ್ಟು ಮೂದಕ ಪದಾರ್ಥಗಳ ಸೇವನೆಯಿಂದ ಅಪವಿತ್ರಮಾಡಿಕೊಳ್ಳುವದು ಇಹದ ಮತ್ತು ಪರದ ಈ ಎರಡು ದೃಷ್ಟಿಯಿಂದಲೂ ಮಹಾಪರಾಧ. ಇನ್ನಾದರೂ ನಾವು ಕಣ್ತೆರೆದು ಈ ದುರಭ್ಯಾಸಗಳನ್ನು ತ್ಯಜಿಸಿ ಕೊಡಗು ನಾಡನ್ನು ಸುಖ ಸೌಭಾಗ್ಯದ ಆಗರವಾಗಿ, ಪವಿತ್ರಭಾವನೆಯ ಜನರ ನಿವಾಸಸ್ಥಾನವಾಗಿ ಮಾಡುವಾ.

ಮುಂದಾಳುಗಳ ಬಿಡುಗಡೆ. ಏಪ್ರಿಲ್ ೨೫ ರಲ್ಲಿ?

ಮುಂದೆ ಜರಗಲಿರುವ ಗೋಲ್ಡನ್ ಗೇಟ್ ಸಮ್ಮೇಳನದಲ್ಲಿ ಭಾಗವಹಿಸುವ ಕಾಲಕ್ಕೆ ಯಾವದೇ ಕಲಂಕವಿಲ್ಲದೆ ಭಾಗವಹಿಸಲನುವಾಗುವಂತೆ ಬರುವ ಏಪ್ರಿಲ್ 2೫ ರೊಳಗೆ ಹಿಂದೂದೇಶದ ಜೈಲಿನಲ್ಲಿರುವ ಕಾಂಗ್ರೆಸ್ ಮುಂದಾಳುಗಳನ್ನು ಬಿಡಲಾಗುವದೆಂದು ವರ್ತಮಾನವಿದೆಯೂಗಿ ವರದಿಯೊಂದು ತಿಳಿಸುತ್ತದೆ ಬ್ರಿಟಿಷ್ ಮಂತ್ರಿಮಂಡಳದಲ್ಲಿರುವ ಲೇಬರ್ ಪಕ್ಷದ ಮಂತ್ರಿಗಳು ಈ ಸಮಸ್ಯೆಯನ್ನು ಮುಂದಿಟ್ಟು ಮುಂದಾಳುಗಳ ಬಿಡುಗಡೆಮಾಡಬೇಕೆಂದು ಹೆರಾಲ್ಡ್ ಲಾಸ್ಕಿಯವರು ಮಂತ್ರಿಗಳಲ್ಲಿ ಒತ್ತಾಯಪಡಿಸುತ್ತಿರುವರಂತೆ

ಕೊ ಡ ಗು

ಶಾ. 3-3-ರಳಿನೇ ಶುಕ್ರವಾರ

ಕಾಗದದ ತೊಂದರೆ.

ಕೊಡಗಿನಲ್ಲಿ ಕಾಗದದ ತೊಂದರೆ ದಿನೇ ದಿನೇ ಹೆಚ್ಚುತ್ತಿದೆ. 1943 ರಲ್ಲಿ ಮೈಸೂರು ಸರಕಾರದಿಂದ ಬಂದ ಸುಮಾರು ಐದು ಟನ್ ಕಾಗದದ ವಿನಹ ಈ ವರೆಗೆ ಕಾಗದ ಬಂದಿಲ್ಲ. ಕಳೆದ ನಾಲ್ಕು ತಿಂಗಳುಗಳಿಂದ ಕಾಗದದ ಕೊರತೆಯು ಕಾಠಿಣ್ಯವು ಬಹು ಹೆಚ್ಚಾಗಿದೆ. ಪೇಟೆಯಲ್ಲಿ ಎಷ್ಟು ಪ್ರಯತ್ನಿಸಿದರೂ ಒಂದು ಗಜ ಕಾಗದ ದೊರೆಯಲಾರದು. ಇತರ ಭಾಗಗಳ ಸ್ಥಿತಿಯನ್ನು ಪರಿಶೀಲಿಸಿದರೆ ಈಗೀಗ ಕಾಗದದ ತೊಂದರೆಯು ನಿವಾರಣೆಯಾಗುತ್ತಾ ಬರುತ್ತಿರುವದು ಕಂಡುಬರುವದು. ಆದರೆ ಕೊಡಗಿನ ಸ್ಥಿತಿಯು ದಿನ ಕಳೆದಂತೆ ದಾರುಣವಾಗತೊಡಗಿದೆ. ಕಳೆದ ನ್ಯಾಯವಿಧಾಯಕ ಸಭೆಯಲ್ಲಿ ಮಾನ್ಯ ಚೀಫ್ ಕಮಿಷನರು ಕೊಡಗಿಗೆ 30 ಟನ್ ಕಾಗದವು ಇಂಡಿಯಾ ಸರಕಾರದಿಂದ ದೊರೆಯುವದೆಂದು ತಿಳಿಸಿದರು. ಈಗ ಅದು ಮೂವತ್ತು ಟನ್ ಅಲ್ಲ; ವರ್ಷಕ್ಕೆ 15 ಟನ್ ಎಂಬುದಾಗಿ ನಿರ್ಣಯವಾಗಿದೆ. ಕೊಡಗಿಗೆ ವರ್ಷಕ್ಕೆ 15 ಟನ್ ಕಾಗದ ದೊರೆತರೂ ತತ್ಕಾಲ ಸಾಕಾಗಬಹುದು. ಆದರೆ ಚೀಫ್ ಕಮಿಷನರು ಕೌನ್ಸಿಲಿನಲ್ಲಿ ನುಡಿದು ಆರ್ಧವರ್ಷವಾಗುತ್ತಾ ಬಂದರೂ ಕಾಗದದ ಸುಳಿವೇ ಇಲ್ಲ. ಈ ಮೊದಲೊಮ್ಮೆ ಮೈಸೂರು ಸರಕಾರದಿಂದ ಕೊಡಗಿಗೆ 15 ಟನ್ ಕಾಗದ ಮಂಜೂರಾಗಿದ್ದರೂ ಸಕಾಲದಲ್ಲಿ ಅವನ್ನು ಪಡಕೊಳ್ಳದೆ ಅದು ಪೂರ್ತಿ ದೊರೆಯದಾಯಿತೆಂದು ತಿಳಿಸುಬರುತ್ತದೆ. ಅದೇ ರೀತಿ ಈ ವರ್ಷವೂ ನಮಗೆ ಮದ್ರಾಸ್ ಸರಕಾರದಿಂದ 15 ಟನ್ ಕಾಗದ ಮಂಜೂರಾಗಿದ್ದರೂ ಈ ವರೆಗೆ ಏನೂ ಬಂದಿರುವದಿಲ್ಲ. ಈ ವರ್ಷ ಅಂತ್ಯವಾಗಲಿಕ್ಕೆ ಒಂದು ತಿಂಗಳು ಮಾತ್ರವಿದೆ. ಅವರೊಳಗೆ ಈ ಕಾಗದವನ್ನು ತರಿಸಿಕೊಳ್ಳದಿದ್ದರೆ ಅಮೂ ದೊರೆಯದಾಗಬಹುದು. ಕೊಡಗಿನಲ್ಲಿ ಇಂದು ಕಾಗದಕ್ಕಾಗಿ ಜನರು ಪಡುತ್ತಿರುವ ಕಷ್ಟವು ಅವರ್ಣನೀಯವಿದೆ. ಸರಕಾರವು ಎಚ್ಚೆತ್ತು ಆದಷ್ಟು ಬೇಗನೆ ಇವನ್ನು ತರಿಸುವ ಏರ್ಪಾಡು ಮಾಡಬೇಕು.

ದಿವಂಗತ ಅಜ್ಜಾನೂಡ ಮೊದಪ್ಪನವರು.

ಶ್ರೀ. ಅಜ್ಜಾನೂಡ ಮೊದಪ್ಪನವರು ಶಾ. 23 ರಲ್ಲಿ ತಮ್ಮ ಕುರ್ಚಿ ಗ್ರಾಮದ ಮನೆಯಲ್ಲಿ ಸಿಡುಬು ಕಾಯಿಲೆಯಿಂದ ದಿವಂಗತರಾದರು. ಶ್ರೀಯುತರು ಸರಳ ಸ್ವಭಾವದ ಸಜ್ಜನರಾಗಿದ್ದರು. ಆಧುನಿಕ ತಳಕು, ವೋಸ, ಮೊದಲಾದುವು ಲವಲೇಶವೂ ಅವರಲ್ಲಿರಲಿಲ್ಲ ಹೆಚ್ಚಿನ ವಿದ್ಯಾಹಾರಂಗತರಲ್ಲದಿದ್ದರೂ ತಮ್ಮ ಶಕ್ತಿಗೆ ಶಕ್ಯಂತೆ ನಾಡಿನ, ಜನತೆಯ ಸೇವೆಮಾಡುತ್ತಿದ್ದರು. ಶ್ರೀಮಂಗಲನಾಡಿನ ವತಿಯಿಂದ ಇವರು ಅನೇಕ ವರ್ಷಗಳ ವರೆಗೆ ಕೊಡಗು ನ್ಯಾಯವಿಧಾಯಕ ಸಭೆಯ ಮತ್ತು ಜಿಲ್ಲಾ ಬೋರ್ಡಿನ ಸದಸ್ಯರಾಗಿದ್ದರು. ಅಖಿಲ ಭಾರತ ರಾಷ್ಟ್ರೀಯ ಆಂದೋಲನದಲ್ಲಿ ತಮ್ಮ ಅಳಲು ಸೇವೆಯನ್ನು ಹೃತ್ಪೂರ್ವಕವಾಗಿ ಸಲ್ಲಿಸುತ್ತಿದ್ದರು. ದೇಶಕ್ಕಾಗಿ ಕಾರಾಗೃಹವಾಸವನ್ನೂ ಅನುಭವಿಸಿದರು. ಇವರ ನಿಧನದಿಂದ ನಿಸ್ಸೀಮ ದೇಶಭಕ್ತರೊಬ್ಬರ ಕಣ್ಮರೆಯಾದಂತಾಯಿತು. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೂ, ಅವರ ಕುಟುಂಬಕ್ಕೆ ದುಃಖಸಹನಾಶಕ್ತಿಯನ್ನೂ ದಯಪಾಲಿಸಲೆಂದು ಪ್ರಾರ್ಥಿಸುವೆವು.

ಚೈನಾದಲ್ಲಿ ಅಂತಃಕಲಹ?

ಚೈನಾದಲ್ಲಿ ಎರಡು ಪಕ್ಷಗಳಿರುವದು ವಾಚಕರಿಗೆ ತಿಳಿದಿರಬಹುದು. ಒಂದು ಕಮ್ಯೂನಿಷ್ಟರ ಪಕ್ಷ; ಮತ್ತೊಂದು ಚಿಯಾಂಗ್ ಕೈಶೆಕರ ನೇತೃತ್ವದಲ್ಲಿರುವ ಕ್ಯುಮಿಂಟಾಂಗ್ ಪಕ್ಷ. ಈ ಪಕ್ಷಗಳಲ್ಲಿ ವೈಮನಸ್ಸು ಬಹು ಹಿಂದಿನಿಂದಲೇ ಇತ್ತು. ಆದರೆ ಜಪಾನರ ಒತ್ತಡ ಚೈನಾದಲ್ಲಿ ಜೋರಾದಾಗ ಸಮಗ್ರ ಚೀನಾದ ಹಿತದೃಷ್ಟಿಯಿಂದ ಈ ಎರಡು ಪಕ್ಷಗಳು ಒಂದಾಗಬೇಕೆಂದು ಬಗೆದು ಕಮ್ಯೂನಿಸ್ಟ್ ಪಕ್ಷದವರು ಕ್ಯುಮಿಂಟಾಂಗ್ ಪಕ್ಷಕ್ಕೆ ಸೂಚನೆಯಿತ್ತಿದ್ದರು. ಆದರೆ ಚಿಯಾಂಗ್ ಕೈಶೆಕರು ಈ ಸ್ನೇಹಹಸ್ತವನ್ನು ನಿರಾಕರಿಸಿ ಕಮ್ಯೂನಿಸ್ಟ್ ಪಕ್ಷವನ್ನು ಮುರಿಯುವ ಪ್ರಯತ್ನವನ್ನೇ ಮಾಡುತ್ತಿದ್ದರು. ಜಪಾನ್ ರೊಡನೆ ಯುದ್ಧ ಮಾಡಲೆಂದು ಬರುವ ಮಿತ್ರಸೇನೆಗಳನ್ನು, ಕಮ್ಯೂನಿಷ್ಟರನ್ನು ಹದೆಬಡೆಯಲು ಉಪಯೋಗಿಸುತ್ತಿದ್ದರೆಂಬುವಾಚಕರಿಗೆ ತಿಳಿಯದ್ದಲ್ಲ. ಕಮ್ಯೂನಿಷ್ಟರನ್ನು ಮುರಿಯಲು ಚಿಯಾಂಗರು ತಮ್ಮ ಮೂರನೆದಳವನ್ನು ಕಳುಹಿಸಿದ್ದರು. ಕಮ್ಯೂನಿಷ್ಟರ ನಾಲ್ಕನೆ ದಳವು ಅನೇಕ ದಿನಗಳ ವರೆಗೆ ಯುದ್ಧ ಮಾಡಿ ಚಿಯಾಂಗರು ಕಳುಹಿಸಿದ ಸೇನೆಯನ್ನು ಹಿಂದಕ್ಕಟ್ಟಿರುವರು. ಚಿಯಾಂಗರ ದಳವು ಚೀನಾದಲ್ಲಿರುವ ಇತರ ಮಿತ್ರಸೇನೆಗಳೊಡನೆ ಆಲೋಚನೆಗೆ ತೊಡಗಿರುವದಂತೆ. ಚೀನಾದ ಬಿಕ್ಕಟ್ಟಿನ ಈ ಕಾಲದಲ್ಲಿ ಈ ರೀತಿಯ ಅಂತಃಕಲಹವು ಪ್ರಾರಂಭವಾದುದು ಶೋಚನೀಯವೇ ಸರಿ.

ನ ರ್ತ ಮಾ ನ.

ಅಮ್ಮತ್ತಿ ಹೈಯರ್ ಎಲಿಮೆಂಟರಿಯ ವಾರ್ಷಿಕೋತ್ಸವವು ಶಾ. 3-3-45 ನೇ ಶನಿವಾರ ರಾ. ಬ. ಕೆ. ಟಿ. ಉತ್ತಪ್ಪ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ನಡೆಯುವದು.

1945 ನೇ ಇಸವಿಯ ಆಹಾರಧಾನ್ಯಗಳ ನಿಯಂತ್ರಣದ ಮೇರೆ ಲೈಸೆನ್ಸ್ ಕೊಡುವ, ಲೈಸೆನ್ಸಿಗೆ ಅರ್ಜಿ ಸ್ವೀಕರಿಸುವ, ಉಳುವರಿ ಧಾನ್ಯದ ಲೆಕ್ಕ ಸ್ವೀಕರಿಸುವ ಅಧಿಕಾರಗಳನ್ನು ಅಸಿಸ್ಟೆಂಟ್ ಕಮಿಷನರ ಪರ್ಸನಲ್ ಅಸಿಸ್ಟೆಂಟರಿಗೆ ಕೊಡಲಾಗಿದೆ. ಖಾನೂನಿಗೆ ವಿರುದ್ಧವಾಗಿ ದವಸವನ್ನು ಕೂಡಿಟ್ಟವರಿ ಅದನ್ನು ಆಜಮೂಯಿಸಿ ಸರಕಾರದ ಅಧೀನಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಪರ್ಸನಲ್ ಅಸಿಸ್ಟೆಂಟರಿಗೂ, ಫುಡ್‌ಗ್ರೈಯಿನ್ಸ್ ಇನ್ಸ್‌ಪೆಕ್ಟರುಗಳಿಗೂ ಕೊಡಲಾಗಿದೆಯೆಂದು ಪ್ರಕಟವಾಗಿದೆ.

1943 ರಲ್ಲಿ ದಕ್ಷಿಣ ಕೊಡಗು ಸಹಕಾರಿ ಸ್ಟೋರಿಗೆ ಕಳುಹಿಸಿದ 40 ಚೀಲ ಸಕ್ಕರೆಯ ಲೆಕ್ಕವು ಕಾಣೆಯಾದದ್ದು ಸಂಘದ ಕಳೆದ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದು ಆ ಬಗ್ಗೆ ಪೊಲೀಸು ತನಿಕೆ ನಡೆಯುತ್ತಿದೆ.

ಫಾರೆಸ್ಟ್ ಡಿವಿಜನಲ್ ಆಫೀಸರಾಗಿರುವ ರಾ. ಸಾ. ಕೋದಾಂಡ ಚುಂಗಪ್ಪನವರನ್ನು ಚೀಫ್ ಫಾರೆಸ್ಟ್ ಆಫೀಸರರ ಪರ್ಸನಲ್ ಅಸಿಸ್ಟೆಂಟರಾಗಿ ನೇಮಕ ಮಾಡುವ ವಾರ್ತೆ ಇದೆ.

ಕೊಡಗು ವಿದ್ಯಾನಿಧಿಯಿಂದ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಟ್ಟವರಲ್ಲಿ ಅಜ್ಜಿಕುಟ್ಟಿರ ಐಯ್ಯಪ್ಪ ಎಂಬುದರ ಬದಲು ಬಲ್ಲಚಂಡ ಮುದ್ದಪ್ಪ ಎಂದು ತಿದಿಕೊಳ್ಳಬೇಕಾಗಿದೆ. ಇದಲ್ಲದೆ ಶ್ರೀಗಳಾದ ಪಾರ್ವಂಗಡ ಬೆಳ್ಯಪ್ಪ, ಚೊಟ್ಟೆಂಗಳ ನಂಜಪ್ಪ, ನೆರವಂಡ ಕುಶಾಲಪ್ಪ ಮತ್ತು ಮಂಡೇಟಿರ ದೇವಕಿ ಇವರುಗಳಿಗೂ ವಿದ್ಯಾರ್ಥಿವೇತನ ಕೊಡಲಾಗಿದೆ.

ಮಡಿಕೇರಿಯ ಶಾಂತಿಭವನದ ಹೊಟೆಲಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ. ಬಿ. ಮಂಜಪ್ಪ ಎಂಬವನನ್ನು ಯಾರೋ ನಿನ್ನೆ ರಾತ್ರಿ ಚೂರಿಯಿಂದ ಜಖಂಗೊಳಿಸಿರುವರೆಂದೂ, ಅತನು ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವನೆಂದೂ, ಪೊಲೀಸು ತನಿಖೆ ನಡೆಯುತ್ತಿರುವದಾಗಿಯೂ ವಾರ್ತೆ.

'ಗವ್ ಬೂಟ್' ನ್ನು ನಿಯಂತ್ರಿತ ಬೆಲೆಗಿಂತಾ ಹೆಚ್ಚಿನ ಕ್ರಯಕ್ಕೆ ಮಾರಿದರೆಂಬ ಆಪಾದನೆಯ ಮೇಲೆ ಮಡಿಕೇರಿಯ ಜವುಳಿ ವ್ಯಾಪಾರಿ ಶ್ರೀ ನಿರ್ಮಲಂಡ ಉತ್ತಪ್ಪನವರಿಗೆ ರೂ 600/- ಜುಲ್ಮಾನೆಯನ್ನು ಸೇಲ್ಸ್ ಮೇನ್‌ರವರಿಗೆ ರೂ. 200/- ಜುಲ್ಮಾನೆಯನ್ನು ವಿಧಿಸಲಾಗಿದೆಯೆಂದು ತಿಳಿಯಬರುತ್ತದೆ.

ಕೊಡವ ವಿದ್ಯಾನಿಧಿಯ ಕಾರ್ಯನಿರ್ವಾಹಕರು ತಮ್ಮ ಕಳೆದ ವಿಚಾರಣೆಗಿನಲ್ಲಿ ತಮ್ಮ ಬಾಕಿದಾರರಾದ ಉಪಕೃತರ ಮೇಲೆ ಖಾನೂನು ಕ್ರಮ ನಡೆಸಲು ತೀರ್ಮಾನಿಸಿರುವರು.

ವಾರ್ತೆಗಳು.

ಶ್ರೀ ಆ ವಿ. ಎಸ್. ಶ್ರೀನಿವಾಸಶಾಸ್ತ್ರಿಯವರು ಶಾ. 19 ರಲ್ಲಿ ಮದ್ರಾಸ್ ರಾಯಪೇಟೆಯ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸಭಾ ಭವನದಲ್ಲಿ ಭಾಷಣಮಾಡುತ್ತಿದ್ದಾಗ ಇದ್ದಕ್ಕಿದ್ದಂತೆಯೇ ತಲೆತಿರುಗಿ ಬಿದ್ದರು. ಕೂಡಲೇ ಅವರಿಗೆ ಪ್ರಥಮ ಚಿಕಿತ್ಸೆ ಮಾಡಲಾಯಿತು. ಅವರು ಸ್ವಲ್ಪ ಉತ್ತಮಗೊಂಡ ಮೇಲೆ ಅವರನ್ನು ಮನೆಗೊಯ್ಯಲಾಯಿತು.

2 ಲಕ್ಷ ರೂಪಾಯಿ ಅಪಹರಿಸಿದ ಖಟ್ಟಿಯಲ್ಲಿಯ ಆರೋಪಿಗಳಾದ ಬೊಂಬಾಯಿಯ ಶಾ. ಪಾರ್ಡಿಯವರನ್ನು ಕೋರ್ಟಿನಿಂದ ಜೈಲಿಗೆ ಕರೆದೊಯ್ಯುತ್ತಿರುವಾಗ ಟೀ ಕುಡಿಯಲು ಹೋಟೇಲಿಗೆ ಹೊಕ್ಕು ಅಲ್ಲಿಂದ ಪಾರಾಗಿ ಹೋಗಿರುವರು. ಈ ಬಗ್ಗೆ ಒಬ್ಬ ಪೊಲೀಸ್ ಅಧಿಕಾರಿ ಹಾಗೂ ಇಬ್ಬರು ಪೊಲೀಸರಿಗೆ ಸಸ್ಪೆಂಷನ್ ಆಗಿದೆ. ಪಾರ್ಡಿಯವರು ಈಗಪುನಹ ಬಂಧಿತರಾಗಿದ್ದಾರೆ.

ಕಂಟ್ರೋಲ್ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಿ ಸುಮಾರು 600 ರೂಪಾಯಿ ಲಾಭ ಮಾಡಿಕೊಂಡೆನೆಂಬ ಆರೋಪದ ಕಾರಣದಿಂದ ಕರಾಚಿಯ ಚುನಿಲಾಲ್ ಪಟೇಲ್ ಎಂಬಾತನಿಗೆ 5 ಸಾವಿರ ರೂಪಾಯಿಗಳ ಜುಲ್ಮಾನೆಯಾಗಿದೆ.

ಕಸ್ತೂರ್ಬಾ ಸ್ಮಾರಕ ನಿಧಿಯ ವೈದ್ಯಕೀಯ ಮಂಡಳದವರು ಸೇವಾ ಗ್ರಾಮದಲ್ಲಿ ಸಭೆಸೇರಿ ಹಳ್ಳಿಗಳ ಸ್ತ್ರೀಯರು ಹಾಗೂ ಚಿಕ್ಕ ಮಕ್ಕಳಿಗೆ ವೈದ್ಯಕೀಯ ಸಹಾಯ ಒದಗಿಸುವದು, ಪಾಯಿ ಉಪಚಾರಕೆ ಮೊದಲಾದುವನ್ನು ಸಿದ್ಧಪಡಿಸುವದು ಈ ಬಗ್ಗೆ ಚರ್ಚೆ ಮಾಡಿದರು.

1943 ರಿಂದ 46 ರ ವರೆಗೆ ಒಟ್ಟು ಬರಗಾಲ ಮೂಲಕ ಬಂಗಾಲ ಸರಕಾರಕ್ಕೆ 61 ಕೋಟಿ ರೂಪಾಯಿ ಹೆಚ್ಚು ಕಡಿಮೆ ಬಂದಿರುವದೆಂದು ಆರ್ಥಸಚಿವರು ಅಸೆಂಬ್ಲಿಯಲ್ಲಿ ತಿಳಿಸಿದರು.

ಸತೇಂದ್ರ ಸೇನ ಎಂಬ ಸೆಕ್ಯೂರಿಟಿ ಪೈದಿಗಳು ರಾಜಕೀಯ ಕೈದಿಗಳನ್ನು ನಡೆಸಿಕೊಳ್ಳುತ್ತಿರುವ ರೀತಿ ವಿರುದ್ಧ ಅನ್ನತ್ಯಾಗ ಪ್ರಾರಂಭಿಸಿರುವರೆಂದು ತಿಳಿಯುತ್ತದೆ.

ನರೇಂದ್ರ ಮಂಡಲದ ಅಧಿವೇಶನವು ಮಾರ್ಚ್ ತಿಂಗಳ ಮಧ್ಯದಲ್ಲಿ ಜರುಗುವದು. ನರೇಂದ್ರರು ಹಾಗೂ ವೈಸರಾಯರಲ್ಲಿ ಅಷ್ಟರಲ್ಲಿ ಸಂಧಿಯಾಗಬಹುದೆಂದು ಊಹಿಸಲಾಗಿದೆ.

ಸರಹದ್ದು ಪ್ರಾಂತ್ಯ ಕಾಂಗ್ರೆಸಿಗರು ನಾರ್ಥ್ ಮಧ್ಯದಲ್ಲಿ ಕಾಂಗ್ರೆಸಿಗರ ಸಂಖ್ಯೆ ಕುಂಡಿಸಲು ನಿರ್ಧರಿಸಿದ್ದು ಸರೋಜಿನಿ ನಾಯ್ಡು, ಭೂಲಾಬಾಯಿ ದೇಸಾಯಿ, ಮೃದುಲಾಬೇನ್ ಸಾರಾಭಾಯಿ, ಡಾ. ಸಯ್ಯದ್ ಮಹ್ಮದ್ ಇವರಿಗೆ ಆಮಂತ್ರಣ ಕೊಟ್ಟಿರುವರು.

ಬಂಗಾಳ ಸರಕಾರದವರು ಕಲಕತ್ತೆಯಲ್ಲಿಯ ವೇಶ್ಯಾಗೃಹಗಳ ಉಚ್ಚಾಟನೆ ಜೋರಿನಿಂದ ನಡಿಸಿದ್ದಾರೆ. ಜನವರಿ 31 ಕ್ಕೆ 121 ಮನೆಗಳನ್ನು ಅವರು ಅವ್ಯವಸ್ಥಿತವೆಂದು ಸಾರಿದ್ದರು. ಅದರಲ್ಲಿ 14 ವಿದೇಶಿ, 103 ಆಂಗ್ಲೋ ಇಂಡಿಯನ್ ಮತ್ತು 1199 ಹಿಂದಿ ಸ್ತ್ರೀಯರಿದ್ದರು. 43 ಮನೆಗಳು ಈಗ ಮುಚ್ಚಿಹೋಗಿದ್ದು 21 ಮನೆಯವರ ಮೇಲೆ ಅಜ್ಞೆಯು ಉಲ್ಲಂಘನೆಯ ಬಗ್ಗೆ ಖಟ್ಲೆ ಹಾಕಲಾಗಿದೆ.

ಬಂಗಾಳ ಪ್ರಾಂತದಲ್ಲಿ ಬಟ್ಟೆಯ ಅಭಾವವನ್ನು ಹೆಚ್ಚಾಗಿದೆಯೆಂದೂ ಹರಕುಬಟ್ಟೆಯಿಂದಲೂ ಸಹ ದೊರೆಯದೆ ಜನರು ಕಷ್ಟಪಡುತ್ತಿರುವರೆಂದೂ ಬಟ್ಟೆ ಸರಿಯಾಗಿಲ್ಲದ ಕಾರಣ ಮನೆಯಿಂದ ಹೊರಗೆ ಬರಲು ಜನರು ಸಾಚುತ್ತಿರುವರೆಂದೂ, ಮೈಮೇಲೆ ಹೆಸಿಬೆಯಿಲು ಸರಿಯಾಗಿ ಬಟ್ಟೆಯಿಲ್ಲದ್ದರಿಂದ ಅನೇಕ ಹೆಂಗಸರು ಮಾನಸಂರಕ್ಷಣಾರ್ಥ ಆತ್ಮಹತ್ಯ ಮಾಡಿಕೊಂಡಿರುವರೆಂದೂ ತಿಳಿಯಬಂದಿದೆ.

ಗಾಂಧೀಜಿಯವರ ಆರೋಗ್ಯವು ಚೆನ್ನಾಗಿಲ್ಲ. ಆದ್ದರಿಂದ ವರ್ಧಾದಲ್ಲಿರುವ ಪ್ರೊಫೆಸರ್ ಆಗರವಾಲರ ಮನೆಗೆ ಅವರು ಹೋಗಿರುವರು. ಅಲ್ಲೇ ಕೆಲದಿನಗಳವರೆಗೆ ಅವರು ಇರಬಹುದೆಂದು ತಿಳಿಬಂದಿದೆ. ಗಾಂಧೀಜಿಯವರನ್ನು ಪರೀಕ್ಷಿಸಿದ ಡಾಕ್ಟರರುಗಳು ವರ್ಧಾದಲ್ಲಿ ಹೆಚ್ಚಿನ ಶೀತದ ಕಾರಣ ಈ ಬೇಸಿಗೆಯನ್ನು ಅಲ್ಲಿ ಕಳೆಯಬಾರದೆಂದು ಸೂಚಿಸಿರುವರು. ಸದ್ಯದ ಸ್ಥಿತಿಯಲ್ಲಿ ಸೇವಾಗ್ರಾಮವನ್ನು ಬಿಟ್ಟು ಹೋಗಲು ಗಾಂಧೀಜಿಗೆ ಇಷ್ಟವಿರುವಂತೆ ಕಂಡುಬರುವದಿಲ್ಲ.

ಪಂಡಿತ ಜವಾಹರಲಾಲರನ್ನೂ, ಪಂಡಿತ ಗೋವಿಂದ ವಲ್ಲಭ ಪಂತರನ್ನೂ ಅಹಮದ್ ನಗರದಿಂದ ಬರೇಲಿಜೈಲಿಗೆ ವರ್ಗಾಯಿಸಲಾಗಿದೆ ಎಂಬುದಾಗಿ 'ಹಿಂದೂಸ್ಥಾನ್ ಟೈಮ್ಸ್' ಪತ್ರಿಕೆಯಲ್ಲಿವರದಿಯಾಗಿದೆ. ಆದರೆ ಈ ಸುದ್ದಿಗೆ ಅಧಿಕಾರಿ ವರ್ಗದಲ್ಲಿ ಸಮರ್ಥನೆ ದೊರೆತಿಲ್ಲ. ಈ ರೀತಿ ಈ ಇಬ್ಬರು ಕಾಂಗ್ರೆಸ್ ಮುಖಂಡರನ್ನು ವರ್ಗಮಾಡುವುದಕ್ಕೆ ಏನೋ ಕಾರಣವಿರಬೇಕು ಎಂದು ಊಹಿಸಲಾಗಿದೆ.

ರಾಫಿ ಅಹಮದ್ ಕಿದ್ವಾಯ್‌ರನ್ನು ಈಚೆಗೆ ಬರೇಲಿ ಜೈಲಿನಿಂದ ಅಲಹಾಬಾದಿನ ನೈನಿ ಸೆಂಟ್ರಲ್ ಜೈಲಿಗೆ ವರ್ಗಾಯಿಸಲಾಯಿತು. ರಾಫಿ ಅಹಮದ್ ಕಿದ್ವಾಯ್‌ರನ್ನು ವರ್ಗಮಾಡುವುದಕ್ಕೆ ಅವರ ದೇಹಾಲಸ್ಯ ಪರಿಸ್ಥಿತಿಯಲ್ಲದೆ ಬೇರೆ ಕಾರಣವೂ ಇರಬೇಕು. ಈ ವಿಚಾರವನ್ನು ಸೂಕ್ಷ್ಮವಾಗಿ ಸಂಯುಕ್ತ ಪ್ರಾಂತ ಅಡ್ವೈಜರ್ ಸರ್ ಟೆನೆಂಟ್ ಸ್ಟೋನ್‌ರು ತಿಳಿಸಿದ್ದರು. ಪಂಡಿತ ನೆಹರೂರವರ ವರ್ಗ ವ್ಯವಸ್ಥೆಯೇ ಇದಕ್ಕೆ ಕಾರಣವಾಗಿರಬೇಕು.

—೦೦—

ಅಖಿಲ ಕೊಡಗು ಜವುಳಿ ವ್ಯಾಪಾರಸ್ಥರ ಸಂಘ.

ತಾ. 23—2—45ರಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ತೀರ್ಮಾನವಾದ ಕೆಲವು ಕಂಡಾಯಗಳನ್ನು ಸದಸ್ಯರುಗಳ ತಿಳುವಳಿಕೆಗಾಗಿ ಈ ಕೆಳಗೆ ಪ್ರಕಟಿಸಲಾಗಿದೆ.

(1) ಕೋಟಾ ಹಣವನ್ನು ಪಾವತಿ ಮಾಡುವಾಗ A ತರಗತಿಯವರು 1000 ರೂ. ಗಳನ್ನೂ, B ತರಗತಿಯವರು 500 ರೂ. ಗಳನ್ನೂ ಮತ್ತು C ತರಗತಿಯವರು 250 ರೂ. ಗಳನ್ನೂ ಸಮಯಕ್ಕೆ ಸರಿಯಾಗಿ ಪಾವತಿ ಮಾಡಬೇಕೆಂತಲೂ, ಹೆಚ್ಚಿನ ಹಣದ ಅವಶ್ಯಕತೆ ಬಂದಾಗ ಎಡ್ಜೆಸ್ಟಿ ಕಮಿಟಿಯವರು ನಿರ್ಧರಿಸುವ ಹೆಚ್ಚಿನ ಮೊಬಲಗನ್ನು ಪಾವತಿ ಮಾಡಬೇಕೆಂತಲೂ ತೀರ್ಮಾನಿಸಲಾಯಿತು.

(2) ಯಾವನೇ ಒಬ್ಬ ಮೆಂಬರನು ತಾನು ಪಾವತಿ ಮಾಡಬೇಕಾದ ಕೋಟಾ ಹಣವನ್ನು ಸಮಯಕ್ಕೆ ಸರಿಯಾಗಿ ಪಾವತಿ ಮಾಡದೆ ಸತಾಯಿಸಿದಲ್ಲಿ ಅಂಥಾ ಮೆಂಬರನಿಗೆ ಒಂದು ತಿಂಗಳ ನೋಟೀಸು ಕೊಟ್ಟು ಆತನನ್ನು ಮೆಂಬರುತನದಿಂದ ವಜಾ ಮಾಡಬೇಕು ಮತ್ತು ಈ ಅಧಿಕಾರವನ್ನು ಕಮಿಟಿ ಮೆಂಬರುಗಳಿಗೆ ವಿಡಲಾಯಿತು.

(3) ಸಂಘಕ್ಕೆ ಬೇಕಾದ ಗತಂಗವನ್ನು ವಿಚಾರಿಸಲಿಕ್ಕೂ ಮತ್ತು ಸಿಬ್ಬಂದಿಗಳನ್ನು ನೇಮಿಸಿ ಅವರ ವರಮಾನಗಳನ್ನು ನಿರ್ಧರಿಸಲಿಕ್ಕೂ ಕಮಿಟಿಯವರಿಗೆ ಅಧಿಕಾರ ಕೊಡಲಾಯಿತು.

(4) ಮುಂದಿನ ವರ್ಷದ ಕಮಿಟಿ ಮೆಂಬರುಗಳನ್ನಾಗಿ ಈ ಕೆಳಗಿನ ಸದಸ್ಯರುಗಳನ್ನು ಆರಿಸಲಾಯಿತು. ಶ್ರೀ ಗಳಾದ (1) ಬಿ. ಜಿ. ಬೆಳ್ಯಪ್ಪ, (2) ಕೆ. ಕೆ. ತಿಮ್ಮಯ್ಯ, (3) ಕೆ. ಎಂ. ಮಹಮ್ಮದ್ ಗೌಸ್ ಸಾಹೇಬ್, (4) ಎನ್. ಎ. ಉತ್ತಪ್ಪ, (5) ಪಿ. ಹಜ್. ಬಾದ್‌ಷಾ, (6) ಬಿ. ಪಿ. ಬೋಪಯ್ಯ, (7) ಮೂಸೆ ಹುಸೇನ್ ಸಾಹೇಬ್, (8) ಎಂ. ಎಸ್. ಸೋಮಯ್ಯ, (9) ಬಿ. ಜಿ. ಗಣಪತಿ, (10) ಎಂ. ಬಿ ಅಪ್ಪಚ್ಚ, (11) ಎಸ್. ಎನ್. ರಾಮಶೆಟ್ಟಿ, (2) ಕೆ. ಎ. ಮಹಮ್ಮದ್ ಹನೀಫರ್ ಸಾಹೇಬ್, (13) ಬಿ. ಟಿ. ಪೆನ್ನಯ್ಯ, (14) ಟಿ. ಪಿ. ಸುಬ್ಬಯ್ಯ ಮತ್ತು (15) ಕೆ. ಕೆ. ಗಣಪತಿ ಇವರುಗಳು.

ತಾ. 27—2—45ರಲ್ಲಿ ನಡೆದ ಕಮಿಟಿ ಮೀಟಿಂಗಿನ ವಿವರ:—(1) ಸಂಘದ ಪ್ರೆಸಿಡೆಂಟರನ್ನಾಗಿ ಶ್ರೀ ಬಿ. ಜಿ. ಬೆಳ್ಯಪ್ಪನವರನ್ನೂ, ವೈಸ್ ಪ್ರೆಸಿಡೆಂಟರನ್ನಾಗಿ ಶ್ರೀ ಮೂಸೆ ಹುಸೇನ್ ಸಾಹೇಬರನ್ನೂ, ಗೌರವ ಕಾರ್ಯದರ್ಶಿಯವರನ್ನಾಗಿ ಶ್ರೀ ಕೆ. ಕೆ. ತಿಮ್ಮಯ್ಯನವರನ್ನೂ ಮತ್ತು ಖಜಾನ್ಚಿಯವರನ್ನಾಗಿ ಪ್ರೆಸಿಡೆಂಟರನ್ನೂ ಮೇಲ್ಕಂಡ 15 ಕಮಿಟಿ ಮೆಂಬರುಗಳೇ ಏಕಾನಾಯಸಅಯಿತು.

ಕೆ. ಕೆ. ತಿಮ್ಮಯ್ಯ,
ಗೌ. ಕಾರ್ಯದರ್ಶಿ.

FOR SALE.

600 batties of wetland, 60 acres of dryland including a large area of scattered orange plantation (old), Banana area and about 6 acres of newly opened coffee is for sale. The property is situated in Sidapur town and enjoys all facilities including water for the paddy feilds all the year round. The sale also includes cattle, over 50,000 newly burnt bricks, a quantity of sawed timber, tenants' quarters, a zinc thatched cattleshed, a cleared Bungalow site etc. Owners intend to settle outside. Selling price Rs. 20,000/-. Negotiations open till 15th March only.

Apply to:-
Pilot officer D. M. ACHAPPA,
C/o. Sri. **D. K. Appaya,**
Ammatti, S. Coorg.

WANTED.

Applications are invited for the post of a manager on a salary of Rs 40-2-50 p m. The candidates must have passed the S S. L. C., knowing typing, bookkeeping, accountancy and having previous experience in commercial line. The selected candidate has to give 2 personal sureties of Rs. 5,000/-.

An attender on Rs. 20/- p. m. He has to give two personal sureties for Rs. 1000/-

The applications should reach the undersigned in the own handwriting of the candidates on or before 12-3-1945.

K K. Thimaiya,
Hon. Secretary,
All Coorg Cloth Merchants' Association, Mercara.

FOR SALE.

An estate comprising 18 acres of coffee, 18 acres of cardamom and 30 acres of jungle fit for paddy, coffee and cardamom cultivation in Marugodu Village, Mercara Nad. There is a tiled bungalow and other thatched buildings for coolies, cattle etc. and a L. F. road leading to the estate from the 6th mile of Mercara-Siddapur road. Extensive Govt. waste land round about to extend the property andfor grazing. Rs. 25,000/- or near offer.

Apply to 'X'
2-1 - C/o. 'KODAGU'
MERCARA.

✵ SCIENTIFIC ROASTING ✵

ROAST YOUR DAILY COFFEE SEEDS
AT
SRI SHARADA COFFEE WORKS,
18) MERCARA.
AND
MAKE YOUR COFFEE SUPERIOR.
— Rate Per lb. Re. 1—8—0. —

ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.

ಇವರ ಸಿದ್ಧೌಷಧಗಳು.

1. ನಿಕಾಫ್ ಟೂತ್ ಪೌಡರ್. ಬೆಲೆ ಪೊಟ್ಟಣ ಒಂದಕ್ಕೆ 0-1-0
(ಹಲ್ಲುನೋವು, ಕೀವು ಮತ್ತು ರಕ್ತ ಸುರಿಯುವುದು, ನಾರುವುದು ಇತ್ಯಾದಿಗಳಿಗೆ)
2. ಪಾಮರಿ ಚೂರ್ಣ .... ಬೆಲೆ ಪೊಟ್ಟಣ ಒಂದಕ್ಕೆ 0-6-0
(ಕಜ್ಜಿ, ತುರಿ, ವಿಷಬು, ಇತ್ಯಾದಿ ಎಲ್ಲಾ ಚರ್ಮ ರೋಗಗಳಿಗೆ)
3. ಬಾಲವರ್ಧಿನಿ ಮಿಶ್ರಣ .... ಬೆಲೆ ಬಾಟ್ಲಿ ಒಂದಕ್ಕೆ 1-4-0
(ಮಕ್ಕಳ ದುರ್ಬಲತೆ, ಹೊಟ್ಟೆಯುಬ್ಬರ, ಅಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)
4. ದ್ರಾಕ್ಷಾರಿಷ್ಟ .... ಬೆಲೆ ಒಂದು ಬಾಟ್ಲಿಗೆ 2-6-0
ರಕ್ತಕಾಸ, ಕ್ಷಯ, ಹೃದಯ ದೌರ್ಬಲ್ಯ, ಕಾರ್ಶ್ಯಗಳಿಗೆ).
ಉಚಿತ ಕ್ಯಾಟಲಾಗಿಗೆ ಬರೆಯಿರಿ—
ಸೋಲ್ ಏಜೆಂಟ್ಸ್ (ಮೈಸೂರು ಮತ್ತು ಕೊಡಗು)
ದಿ ಅಶ್ವಿನಿ ಮೆಡಿಕಲ್ ಹಾಲ್,
3) 215, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ.

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಯೂ—ಫಾಸ್ಫೋ—ಮೂಲ್ಟ"
ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಹಾಕ್ಟರರಿಗೆ, ಕ್ಷಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್ಫೋಮೂಲ್ಟ್, ಹೆಮೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ಫೇಟ್ ಕೆಫೀನ್, ಸಾಲ್, ಮೂಲ್ಟ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂತವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಶಾಪುಗಳಲ್ಲಿವೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
21) ಗೋಖಲೆ ರೋಡ್, ಬೋಂಬೆ.

The Canara Banking Corporation Limited.

(Incorporated in British India Liablity of Members is Limited)

16) ESTD—1906.

Head Office: U D I P I, South Kanara.

Authorised Capital	.... Rs.	25,00,000
Issued & Subscribed Capital	.... Rs.	16,00,000
Paid up capital	.... Rs.	14,76,355
Reserves	.... Rs.	4,14,302

Total Working Capital Exceeds:
ONE CRORE & 35 LAKHS.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

20) ಪಿ. ಬಿ. ನಂ. 337, ಮದ್ರಾಸು.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

5) ಸ್ಥಾಪನೆ:—೧೮೯೭.

ಳಒನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೫೭,೦೦೦ ರೂಪಿದೆ
	ಚಾಲ್ತಿಯಿಶುವ ವಿಮೆ	೧೬,೪೪,೮೮,೦೦೦ ,,
	ಆಸ್ತಿ	೬,೫೦,೪೬,೦೦೦ ,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು		೮,೫೮,೦೦,೦೦೦ ,,

ಆಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಆನ್ಸಾರಿ, ಸುಬಾಶ ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಚೇರಿ: ಹೊಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. ಯಂ. ರಂಗನಾಥಶೆಟ್ಟಿ,

2) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ-ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಬೊಬಲಗು ರೂ. 95,000, ಜಮಾ ಬಂದ ತೇವಣಾತಿ 2,24.750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದ ಡಿಪಾಜಿಟ್ಟುದಾರರಿಗೆ ಆವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ತೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ರಣಭೇರಿ.

ಜರ್ಮನಿಯಲ್ಲಿ ಭಾಗ ನಮಗೂ ಬೇಕು!

೧೯೪೫ರಲ್ಲಿ ಮತ್ತೊಂದು ಯುದ್ಧ?

— ಲೇ:—'ಗುಪ್ತ' —

'ಮೂರನೇ ಜಾಗೃತಿಕ ಯುದ್ಧವಾಗುವದು ನಿಶ್ಚಯ. ಅದು 1948ರಲ್ಲಿ ಆಗುವದು.' ಈ ಮಾತನ್ನು ಜರ್ಮನಿಯ ಪ್ರಚಾರ ಮಂತ್ರಿಗಳಾಗಿರುವ ಡಾ. ಗೋಬೆಲ್ಸರವರು ಹೇಳಿದವರು. ಪ್ರಾರಂಭವಾದ ಯುದ್ಧವೇ ಮುಗಿದಿಲ್ಲ; ಅದು ಯಾವಾಗ ಮುಗಿದೀತೆಂಬುವುದರ ಕಲ್ಪನೆಯು ಕೂಡ ಇಲ್ಲ. ಹೀಗಿರುವಾಗ ಪುನಹ ಮತ್ತೊಂದು ಯುದ್ಧದ ಸೊಲ್ಲು ಕೇಳುತ್ತಿದೆಯೆಂದು ಗಾಬರಿಗೊಳ್ಳಬೇಡ. ಮಿತ್ರ ರಾಷ್ಟ್ರಗಳ ಮನೋಭಾವವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಮೂರನೇ ಯುದ್ಧದ ಬೀಜಗಳಿಗೆ ಬೇರೆ ಕಡೆ ಹುಡುಕುವ ಅಗತ್ಯವಿಲ್ಲ. ಜಗತ್ತಿನ ಇತರ ರಾಷ್ಟ್ರಗಳ ಮನೋಭಾವವೂ ಮೂರನೇ ಯುದ್ಧಕ್ಕೆ ಬೆಂಬಲ ಕೊಡುವಂತೆಯೇ ಇವೆ. ಮೊನ್ನೆಯಾಗಿ ಯಲ್ಟಾದಲ್ಲಿ ಚರ್ಚಿಲ್, ಟೂಸ್‌ವೆಲ್ಟ್, ಸ್ಟಾಲಿನರ ಭೇಟಿಯಾಗಿ ಜರ್ಮನಿಯನ್ನು ಹರಿದು ಹಂಚಿಕೊಳ್ಳುವ ಏರ್ಪಾಡಾಯಿತಷ್ಟೆ. ಆದರ ಮೇಲೆ ಇತ್ತಲಾಗಿ ಕೆಲವು ಜನಾಂಗಗಳ ಮನೋಭಾವ ವ್ಯಕ್ತವಾಗಿವೆ. ತಾವು ಯುದ್ಧದಲ್ಲಿ ಅಸಾಮ್ಯನ್ಯ ತ್ಯಾಗ ಮಾಡಿರುವುದಾಗಿಯೂ ಅವಕ್ಕೆ ಪ್ರತಿಫಲವಾಗಿ ಜರ್ಮನಿಯ ಕೆಲ ಪ್ರದೇಶಗಳನ್ನು ಆಕ್ರಮಿಸಿಕೊಳ್ಳಲು ಒಪ್ಪಿಗೆ ಕೊಡಬೇಕೆಂದು ಚೀನಾವು ಮಿತ್ರರನ್ನು ಕೇಳಿದೆಯಂತೆ. ಈ ಮೆಥೈ ಹಿಂದೂದೇಶದ ಪರ ಇದೇ ರೀತಿ ಕೇಳಿಕೆಯನ್ನು ಮುಂದಿಟ್ಟವರೂ ಇದ್ದಾರೆ. ಮಿತ್ರರ ಈ ಯುದ್ಧದಲ್ಲಿ ಬಹು ತ್ಯಾಗ ಮಾಡಿದ ಹಿಂದೂದೇಶಕ್ಕೆ ಯುದ್ಧಾನಂತರ ಬರ್ಮಾ, ಮಲಯಾ, ಸಿಂಗಾಪುರ ನೊದಲಾದುವನ್ನು ಬಿಟ್ಟುಕೊಡಬೇಕೆಂದು ಕೇಳಿದ್ದಾರೆ. ಮುಂದೆ ಆಮೇರಿಕದ ಗೋಲಸ್ ಗೇಟ್ ಎಂಬಲ್ಲಿ ಜಗತ್ತಿನ ರಕ್ಷಣಾ ಭರವಸೆಯ ಬಗ್ಗೆ ಮಿತ್ರ ರಾಷ್ಟ್ರಗಳ ಸಮ್ಮೇಳನವೊಂದುನಡೆಯಲಿದೆಯಂತೆ. ಈ ಸಮ್ಮೇಳನದಲ್ಲಿ ಅಕ್ಷರಾಷ್ಟ್ರಗಳ ಮೇಲೆ ಯುದ್ಧ ಸಾರಿದವರೇ ಭಾಗ ವಹಿಸಲು ಅರ್ಹರಂತೆ. ಇದಕ್ಕಾಗಿಯೋ ಎಂಬಂತೆ ಟರ್ಕಿಯು ಅಕ್ಷ ರಾಷ್ಟ್ರಗಳ ಮೇಲೆ ಯುದ್ಧಹೂಡಿದೆ. ಈಜಿಪ್ಟೂ ಯುದ್ಧ ಸಾರಿದೆ. ಈ ಈಜಿಪ್ಟು ಯುದ್ಧ ಹೂಡಿದೆಂಬ ಘೋಷಣೆಯನ್ನುಹಿಡಿದುಕೊಂಡು ಘೋಷಿಸಲಿದ್ದ ಈಜಿಪ್ಟಿನ ಮುಖ್ಯ ಮಂತ್ರಿಗಳನ್ನು ಅಲ್ಲಿಯೇ ಒಬ್ಬರು ಗುಂಡಿಕ್ಕಿ ಕೊಂದಿದ್ದಾರೆ. ಇತ್ತಲಾಗಿ ಐರ್ಲೆಂಡೂ ಸಹ ಅಕ್ಷ ರಾಷ್ಟ್ರಗಳ ಮೇಲೆ ಯುದ್ಧ ಸಾರುವದೆಂಬ ವಾರ್ತೆ ಇದೆ. ಈ ರೀತಿ ಜಗತ್ತಿನ ರಾಷ್ಟ್ರಗಳ ನೀತಿ ಬದಲಾಗತೊಡಗಿದೆ. ಗೆದ್ದವನ ಬಾಲ ಹಿಡಿಯುವ ನೀತಿ ಎಲ್ಲೆಲ್ಲೂ ಇದೆ. ಇರಲಿ, ಈಗ ಜರ್ಮನಿಯನ್ನು ಹಂಚಿಕೊಳ್ಳುವ ಕಾಲಕ್ಕೆ, ಯುದ್ಧದಲ್ಲಿ ದೊರೆತದ್ದನ್ನು ಪಾಲು ಮಾಡಿಕೊಳ್ಳುವ ಕಾಲಕ್ಕೆ, ಮಿತ್ರ ಶಿಬಿರದಲ್ಲಿ ಪರಸ್ಪರ ಐಕ್ಯತೆ ಇದ್ದೀತೆಂದು ಹೇಳಲು ಸಾಧ್ಯವಿಲ್ಲ. ಮೊವುದೇ ಜನಾಂಗವಾಗಲೀ, ವ್ಯಕ್ತಿಯಾಗಲೀ ಸ್ವಾರ್ಥತೆಯ ಮುಸುಕಿನಲ್ಲಿ ಬಿದ್ದಾಗ ಬೇರೊಬ್ಬರ ಹಿತದೃಷ್ಟಿಯಿಂದ ವರ್ತಿಸಲಾರದು. ಈ ಸ್ಥಿತಿಯನ್ನು ಮನಗಂಡು ಡಾ. ಗೋಬೆಲ್ಸನು 1948ರಲ್ಲಿ ಪುನಹ ಯುದ್ಧವಾಗುವದೆಂದು ನುಡಿದಿರಬಹುದೇ? ಇರಲಿ, ಈಗಿನ ಯುದ್ಧವೇ 1948ರಲ್ಲಿ ಮುಗಿದೀತೆಂಬುದಕ್ಕೆ ಸಾಕಷ್ಟು ಪುರಾವೆಗಳಿಲ್ಲ. ಚರ್ಚಿಲರೆನ್ನುವಂತೆ 1946ರಲ್ಲಿ ಜರ್ಮನಿಯ ಹತನಮಾದರೆ ಜಪಾನರನ್ನು ಮುರಿಯಲು ನಂತರ ಎರಡು ವರ್ಷ ಹಿಡಿಯಲಾರದೆಂದು ಹೇಳಬರುವಂತಿಲ್ಲ. ಹೇಗೂ 1948ರಲ್ಲಿ ಹೊಸ ಯುದ್ಧ ಪ್ರಾರಂಭವಾಡೀತೆಂದು ಹೇಳಲಾಗುವುದಿಲ್ಲ. ಅಂಥಾ ಯುದ್ಧ ಪ್ರಾರಂಭವಾಗಬೇಕಾದರೆ ಇಂದು ಮಿತ್ರ ಶಿಬಿರದಲ್ಲಿರುವವರೊಳಗೇ ಆಗಬೇಕೇ ವಿನಹ ಬೇರಿಲ್ಲ. ಜಗತ್ತಿನ ರಾಷ್ಟ್ರಗಳ ನೀತಿಯನ್ನು ನೋಡಿದರೆ ವ್ಯಸನವಾಗುತ್ತದೆ. ಒಂದನ್ನೊಂದು ಸುಲಿಗೆ ಮಾಡುವ, ಸೂರೆಗೊಳ್ಳುವ ದೃಷ್ಟಿಯಲ್ಲದೆ ಬೇರೆ ಕಂಡುಬರುವದಿಲ್ಲ.

ಈ ಮುಥೈ ಅಂದರೆ ತಾ. 24ರಲ್ಲಿ ಹಿಟ್ಲರನು ಒಂದು ಭಾಷಣ ಮಾಡುತ್ತಾ ಹೀಗೆ ನುಡಿದಿದ್ದಾನೆ—'1918ರ ಪುನರಾವೃತ್ತಿಯೇ ಆಗುವುದು. ಜರ್ಮನಿಯು ನಾಶವಾಗುವದೆಂದು ಕೆಲವರು ಹೇಳುತ್ತಿದ್ದಾರೆ. ಇಂದು ಜರ್ಮನಿಯಲ್ಲಿರುವ ಚೈತನ್ಯದ ಒಂದಂಶವಿರುತ್ತಿದ್ದರೆ ಜರ್ಮನಿಯು ಸೋಲುತ್ತಿರಲಿಲ್ಲ. ಪ್ರಜಾಪ್ರಭುತ್ವವಾದಿ ಪಕ್ಷದವರು ಏನೇ ಹೇಳಿಕೊಂಡರೂ ನಮಗೆ ಜಯವು ದೊರೆಯದಿರದು. ಧೃತಿಗೆಡದೆ ಯುದ್ಧ ಮಾಡುವ. ವಿಜಯಶ್ರೀಯು ನಮಗೆ ಒಲಿಯುವ ಚರಿತ್ರಾರ್ಹ ಸಂದರ್ಭ ಬಾರದಿರದು. ಜಗತ್ತಿನ ಯಾವ ಶಕ್ತಿಯೂ ನಮ್ಮ ಹೃದಯವನ್ನು ನಿರ್ಬಲಗೊಳಿಸಲಾರದು. ನನ್ನ ಈ ಶರೀರವು ಈ ಜನಾಂಗಕ್ಕಾಗಿ ಇದೆ. ಅವಿಶ್ರಾಂತಿಯಿಂದ ದೇಶಕ್ಕಾಗಿ ದುಡಿಯುವೆನು. ಹೊಸ ಹೊಸ ಆಯುಧಗಳನ್ನು ತಯಾರಿಸುವೆವು. ಹೇಡಿತನವನ್ನು ನಾನು ನೋಡಲಾರೆ. ಜರ್ಮನರು ಯಾರೂ ಹೇಡಿಗಳಾಗಬಾರದು ಉಜ್ವಲ ಭವಿಷ್ಯ ನಮಗಿದೆ". ಹಿಟ್ಲರನ ಭಾಷಣವನ್ನು ನೋಡಿದರೆ ಜಯ ದೊರೆಯುವುದೆಂಬ ನಂಬಿಕೆಯು ಪೂರ್ಣ ಆತನಿಗಿರುವುದು ಕಂಡು ಬರುವದು. ಮಿತ್ರರು ಹೇಳುವಷ್ಟು ಜರ್ಮನರ ಸ್ಥಿತಿ ಹದಗೆಟ್ಟಿರಲಾರದು. ಮಿತ್ರರೇ ಹೇಳುತ್ತಿದ್ದಾರೆ. ತಮ್ಮಲ್ಲಿಜರ್ಮನರ ಹತ್ತಿರ ಇರುವುದಕ್ಕಿಂಥಾ ಐದು ಪಾಲು ಹೆಚ್ಚಿನ ಸೈನ್ಯ, ವಿಮಾನ, ನೌಕಾಪಡೆಗಳಿವೆಯೆಂದೂ, ಇಷ್ಟು ಶಕ್ತಿ ಇದ್ದ ಮೇಲೆ ಜರ್ಮನರನ್ನು ಹುಡಿ ಹಾರಿಸಲು ಆತಂಕವೇನು? ತ್ರಿಪುರವನ್ನು ನಾಶಮಾಡಲು ಸಮಯ ಕಾದಂತೆ ಮಿತ್ರರು ಸಮಯ ಕಾಯುವ ಕಾರಣವೇನು? ಶಕ್ತಿ ಇರುವವರು ಬೇಗ ಜಯ ಪಡೆದು ಯುದ್ಧ ಮುಕ್ತಾಯಗೊಳಿಸಿದರೆ ಬಡಪಾಯಿಗಳಾದ ಜನತೆಗೂ ಸುಖಶಾಂತಿ ದೊರೆಯಬಹುದೇನೋ?

ಪ್ರತ್ಯಕ್ಷ ರಂಗವನ್ನು ನೋಡಿದರೆ ಅಮೇರಿಕನರು ಸೀಜ್‌ಫೈಡ್ ಲೈನಿನ ಮೇಲೆ ತಮ್ಮ ಆಯುಧಗಳನ್ನು ಪ್ರಯೋಗಿಸುತ್ತಿದ್ದಾರೆ. ಈ ಗೋಡೆಯು 35 ಮೈಲುಗಳನ್ನು ನಾಶ ಮಾಡಿರುವುದಾಗಿ ವಾರ್ತೆ ಇದೆ. ಹೇಗೂ ಈ ಗೋಡೆಯನ್ನು ತುಂಡರಿಸಿ ಜರ್ಮನಿಯೊಳನುಗ್ಗಿದ ವಾರ್ತೆ ಬಂದಿಲ್ಲ. ರ್ಹೂರ್ ಕಣಿವೆಯಲ್ಲಿ ಅತ್ಯುಗ್ರ ಕದನ ನಡೆದಿದ್ದು ಜರ್ಮನರು ರೈನ್ ನದಿಯ ಆಣೆಕಟ್ಟನ್ನು ಕತ್ತರಿಸಿಬಿಟ್ಟ ಕಾರಣ ಈ ಕಣಿವೆಯು ನೀರಿನಿಂದ ಮುಚ್ಚಲ್ಪಟ್ಟಿದೆಯಂತೆ.

ಪೂರ್ವ ಭಾಗದಲ್ಲಿ ರಷ್ಯನರ ಮುನ್ನಡೆಗೆ ಅತಂಕಾಖಂದಿದ್ದರೂ ಅವರು ಸಾವಧಾನದಿಂಪ ಹೆಜ್ಜೆ ಇಡುತ್ತಿದ್ದಾರೆ. ರಷ್ಯನರು ಡೇಂಜಿಗ್ ನಗರದಿಂದ 30 ಮೈಲುಗಳ ದೂರದಲ್ಲಿದ್ದಾರೆ. ವಿಮಾನ ಕಾಳಗವು ಬಹು ಬಿರುಸಿನಿಂದ ನಡೆಯುತ್ತಿದೆ. 1942ರಲ್ಲಿ ಜರ್ಮನರು ರಷ್ಯಾದ ಮಾಸ್ಕೋವಿನ ವರೆಗೆ ಹೋಗಿದ್ದಾಗ ರಷ್ಯನರು ಯಾವ್ಯರೀತಿಯಲ್ಲಿ ಯುದ್ಧ ಕ್ರಮವನ್ನು ಅನುಸರಿಸಿದರೋ ಅದೇ ರೀತಿ ಇಂದು ಜರ್ಮನರು ಯುದ್ಧ ಮಾಡುತ್ತಿದ್ದಾರಂತೆ. ಅನಿರೀಕ್ಷಿತ ಧಾಳಿಯಿಂದ ಮೆಲೇರಿ ಬರುವ ಸೇನೆಗಳ ಕಾರ್ಯಯೋಜನೆಯನ್ನು ಹದಗೆಡಿಸುವದು; ಹಿನ್ನೆಲೆಯಿಂದ ಮೇಲೆ ಬೀಳುವದು ಈ ರೀತಿಯ ಯುದ್ಧ ಕ್ರಮಕ್ಕೆ ತೊಡಗಿರುವರಂತೆ.

ಪೂರ್ವಭಾಗದಲ್ಲಿ ಹೆಚ್ಚಿನ ವಾರ್ತೆಗಳಿಲ್ಲ. ಟೋಕಿಯೋದ ಮೇಲೆ ಮಿತ್ರರ 1600 ವಿಮಾನಗಳು ತಾ. 2ರಲ್ಲಿ ಧಾಳಿ ನಡಿಸಿದೆಯಂತೆ. ಜನರಲ್ ಮೆಕಾರ್ಥರವರು ಫಿಲಿಪೈನಿನಿಂದ ಒಂದೊಂದಾಗಿ ದ್ವೀಪಗಳನ್ನು ಹಿಡಿಯುತ್ತಾ ಮುಂದರಿಯತೊಡಗಿದ್ದಾರೆ. ಹೇಗೂ ಜಪಾನ್ ಯುದ್ಧ ಇನ್ನೂ ಪ್ರಾರಂಭವಾಗಿಲ್ಲವೆಂದೇ ಹೇಳಬಹುದು.

—ವೀರಾಜಪೇಟೆಗೆ 'ಕೊಡಗು' ಏಜೆಂಟರು—

—ಶ್ರೀ ಕೆ. ಎಂ. ಸುಬ್ರಾಯನವರು—